**ದಿನಾಂಕ: 09-06-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಆರ್.ಕೆ. ವಕೀಲರಿಂದ**

3. ನಿಮ್ಮ ಮತ್ತು ವಾದಿಯರ ಮಧ್ಯೆ ಯಾವುದೇ ದ್ವೇಷ ಇಲ್ಲ ಚೆನ್ನಾಗಿಯೇ ಇದ್ದೀರಿ ಎಂದರೆ ಸರಿ. ದಾವಾದ ಆಸ್ತಿ ನಿಮ್ಮ ಹೆಸರಿನಲ್ಲಿ ನಿಮ್ಮ ಮಾಲೀಕತ್ವದಲ್ಲಿ ಇದೆ ಎಂದರೆ ಸರಿ. ದಾವಾದ ಆಸ್ತಿ ನಿಮ್ಮ ಹೆಸರಿನಲ್ಲಿ ಇರುವುದರಿಂದ ದಾವಾದ ಆಸ್ತಿ ಮಾರಾಟ ಮಾಡುವ ಹಕ್ಕು ನಿಮಗೆ ಇದೆ ಎಂದರೆ ಬಸವರಾಜನಿಗೆ ಮಾರಾಟ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗೆ ನಿಮ್ಮ ಮತ್ತು ವಾದಿಯ ಮಧ್ಯೆ ದಿನಾಂಕ 18-09-2019ರಂದು ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ವ್ಯವಹಾರ 16 ಲಕ್ಷಕ್ಕೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-2 ಖರೀದಿ ಕರಾರು ಪತ್ರವನ್ನು ತೋರಿಸಿ ಸ್ಟ್ಯಾಂಪ್ ಪೇಪರನ್ನು ದಿನಾಂಕ 11-03-2019ರಂದು ಖರೀದಿ ಮಾಡಿ ದಿನಾಂಕ 18-09-2019 ರಂದು ಖರೀದಿ ಕರಾರು ಪತ್ರ ಆಗಿದೆ ಎಂದರೆ ಸಾಕ್ಷಿಯು ಅದನ್ನು ನೋಡಿ ಬಿಳಿ ಸ್ಟ್ಯಾಂಪ್ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ನೀವು ಯಾರಿಗೂ ಸಹ ಬಿಳಿ ಸ್ಟ್ಯಾಂಪ್ ಪೇಪರ್ ಮೇಲೆ ಸಹಿ ಮಾಡಿಕೊಡುತ್ತೀರಾ ಎಂದರೆ ಸಹಿ ಮಾಡಿರುತ್ತೇನೆ ಆದರೆ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಿಪಿ-2 ಅಗ್ರಿಮೆಂಟಿನಲ್ಲಿ ಇನ್ನು 11 ಜನ ಸಹಿ ಮಾಡಿದ್ದಾರೆ ಎಂದರೆ ಯಾರೂ ಇದ್ದಿದ್ದಿಲ್ಲ ಎಂದು ಉತ್ತರಿಸುತ್ತಾರೆ. 11 ಜನ ಸಾಕ್ಷಿದಾರರ ಸಮಕ್ಷಮದಲ್ಲಿ ನೀವು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 ರಂತೆ ವ್ಯವಹಾರ ಆಗಿ ದಿನಾಂಕ 18-09-2019 ರಂದು 14 ಲಕ್ಷ ಹಣವನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ. ಉಳಿದ 2 ಲಕ್ಷ ಹಣ ಖರೀದಿ ಪತ್ರ ಆಗುವ ಸಮಯದಲ್ಲಿ ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ.

4. ವಾದಿಯ ಕುಟುಂಬಕ್ಕೆ ಬೇರೆ ಆಸ್ತಿಗಳು ಇವೆ ಎಂದರೆ ಸರಿ. ನೀವು ಮತ್ತು ವಾದಿ ಸೇರಿ 11 ಇ ಸ್ಕೆಚ್ ಮಾಡುವ ಸಲುವಾಗಿ ಅರ್ಜಿಯನ್ನು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಖರೀದಿ ಪತ್ರ ಮಾಡಿಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2017-18 ರಲ್ಲಿ ಬಸವರಾಜನಿಗೆ ಒಪ್ಪಂದ ಮಾಡಿಕೊಟ್ಟಿದ್ದೀರಿ ಎಂದರೆ ಸರಿ. ಸದರಿ ಒಪ್ಪಂದದ ಪ್ರಕಾರ ಬಸವರಾಜನಿಂದ 3 ½ ಲಕ್ಷ ಹಣ ಮುಂಗಡವಾಗಿ ಪಡೆದುಕೊಂಡಿದ್ದೀರಿ ಎಂದರೆ ನಾಲ್ಕು ಲಕ್ಷ ತೆಗೆದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಬಿಳಿ ಸ್ಟ್ಯಾಂಪ್ ನ ಖಾಲಿ ಪೇಪರ್ ಮೇಲೆ ಸಹಿ ಮಾಡಿರುವ ವಿಷಯ ಬೇರೆ ಯಾರಿಗಾದರೂ ಗೊತ್ತಾ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯ ಜೊತೆಯಲ್ಲಿ ಮಾಡಿದಂತಹ ವ್ಯವಹಾರದ ಬಗ್ಗೆ ಬಸವರಾಜನಿಗೆ ಗೊತ್ತಿದೆ ಎಂದರೆ ಗೊತ್ತಿದೆ ಎಂದು ಉತ್ತರಿಸುತ್ತಾರೆ. ಈ ರೀತಿ ವಾದಿಯು ಸಹಿ ಪಡೆದುಕೊಂಡಿದ್ದಾರೆ ಎಂದು ದೂರು ಏನಾದರೂ ಕೊಟ್ಟಿದ್ದೀರಾ ಎಂದರೆ ಗೊತ್ತಿಲ್ಲ.

5. ದಿನಾಂಕ 03-11-2020 ರಂದು ಬಸವರಾಜನಿಗೆ ಸೇಲ್ ಡೀಡ್ ಮಾಡಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ 03-11-2020 ರಂದು ಬಸವರಾಜನಿಗೆ ಸೇಲ್ ಡೀಡ್ ಮಾಡುವಾಗ ವಾದಿ ಬಂದು ತಕರಾರು ಮಾಡಿದ್ದಾರೆ ಎಂದರೆ ಅವರಿಗೆ ನಮಗೆ ಸಂಬಂಧ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಗೆ ಖರೀದಿ ಪತ್ರ ಮಾಡಬೇಕಾಗುತ್ತದೆ ಎಂಬ ಉದ್ದೇಶದಿಂದ ಬಸವರಾಜನಿಗೆ ಸೇಲ್ ಡೀಡ್ ಮಾಡಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನನಗೆ ಆಶಾಬಿ ಮತ್ತು ರೋಷನಬಿ ಎಂಬ ಅಕ್ಕತಂಗಿಯರು ಇದ್ದಾರೆ ಎಂದರೆ ಸರಿ. ದಾವಾದ ಆಸ್ತಿ ನಿಮ್ಮ ಸ್ವಂತ ಆಸ್ತಿ ಆಗಿದ್ದರಿಂದ ನಿಮ್ಮ ಅಕ್ಕತಂಗಿಯರಿಗೆ ಹಕ್ಕು ಇಲ್ಲ ಎಂದರೆ ಅವರ ಅನುಮತಿಯಿಂದ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ವಾದಿಗೆ ಖರೀದಿ ಪತ್ರ ಮಾಡಿಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಬಸವರಾಜನ ಜೊತೆಗೆ ಖರೀದಿ ಪತ್ರ ಸೃಷ್ಠಿ

ಮಾಡಿ ಈ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮತ್ತು ಬಸವರಾಜ ಸೇರಿ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯಿಂದ ಪಡೆದಂತಹ 14 ಲಕ್ಷ ಹಣ ಅವರಿಗೆ ಮರಳಿ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಹಣ ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ